

ಕೊರೊನಾ ತಡೆಗೆ ಇರುವ ಕೊವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್ ಎರಡೂ ಲಸಿಕೆಗಳು ಸಂಪೂರ್ಣ ಸುರಕ್ಷಿತವಾಗಿವೆ. ಹದಿನೆಂಟು ವರ್ಷ ಮೇಲ್ಪಟ್ಟ ಎಲ್ಲರೂ ಪಡೆಯಬಹುದು.

# ಕೊರೊನಾ ಲಸಿಕೆ ತಡವಾಗಿಯೂ ಪಡೆಯಬಹುದು...

■ ಡಾ. ವಿನಯ ಶ್ರೀನಿವಾಸ್

ಲಸಿಕೆ ವೈದ್ಯ ವಿಜ್ಞಾನವು ಸಮುದಾಯಕ್ಕೆ ಕೊಟ್ಟಿರುವ ಮಹತ್ತರವಾದ ಕೊಡುಗೆ. ಈಗಾಗಲೇ ಲಸಿಕೆಯ ಬಳಕೆಯಿಂದ ಸಿಡುಬು, ಪೋಲಿಯೋದಂತಹ ಕಾಯಿಲೆಗಳನ್ನು ಸಂಪೂರ್ಣ ನಿರ್ಮೂಲನ ಮಾಡಿರುವುದರ ಜೊತೆಗೇ ಸಾಕಷ್ಟು ಸೋಂಕಿನ ಕಾಯಿಲೆಗಳನ್ನು ನಿಯಂತ್ರಣದಲ್ಲಿಟ್ಟಿದ್ದೇವೆ. ಇದೀಗ ನಮ್ಮ ಮುಂದೆ ಸವಾಲಾಗಿ ನಿಂತಿರುವುದು ಕೋವಿಡ್ ಸೋಂಕು.

ನೂತನ ವೈದ್ಯ ತಂತ್ರಜ್ಞಾನಗಳ ನೆರವಿನಿಂದ ಕೊರೊನಾ ವೈರಾಣುವಿನ ವಿರುದ್ಧದ ಲಸಿಕೆಯು ನಿರೀಕ್ಷಿಸಿದ್ದಕ್ಕಿಂತಲೂ ಶೀಘ್ರಗತಿಯಲ್ಲಿಯೇ ತಯಾರಾಗಿದೆ. ಕೋವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ಎಂಬ ಎರಡು ಬಗೆಯ ಲಸಿಕೆಗಳು ಎಲ್ಲ ಹಂತದ ಪ್ರಯೋಗಗಳನ್ನು ಯಶಸ್ವಿಯಾಗಿ ಪೂರೈಸಿ ಇದೀಗ ಬಳಕೆಗೆ ಲಭ್ಯವಿವೆ. ಎರಡೂ ಲಸಿಕೆಗಳು ಸಂಪೂರ್ಣ ಸುರಕ್ಷಿತವಾಗಿವೆ. ರೋಗ ನಿರೋಧಕ ವ್ಯವಸ್ಥೆಯನ್ನು ನಿಗ್ರಹಿಸಲು ಔಷಧಗಳನ್ನು ಸೇವಿಸುತ್ತಿರುವವರು ಮಾತ್ರವೇ ಲಸಿಕೆಯನ್ನು ಪಡೆಯುವ ಮೊದಲು ವೈದ್ಯರ ಸಲಹೆಯನ್ನು ಪಡೆಯಬೇಕು. ಉಳಿದಂತೆ ಹದಿನೆಂಟು ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆಯನ್ನು ಹಾಕಿಸಿಕೊಳ್ಳಬಹುದು. ಇಂಗ್ಲೆಂಡ್ ದೇಶದಲ್ಲಿ ಹನ್ನೆರಡು ವರ್ಷ ಮೇಲ್ಪಟ್ಟವರಿಗೂ ಈಗಾಗಲೇ ಯಶಸ್ವಿಯಾಗಿ ಲಸಿಕೆಯನ್ನು ಕೊಡಲಾಗಿದೆ. ಗರ್ಭಿಣಿ ಸ್ತ್ರೀಯರು ಹಾಗೂ ಎದೆ ಹಾಲುಣಿಸುವ ತಾಯಂದಿರು ಸದ್ಯದ ನಿಯಮದ ಪ್ರಕಾರ ಲಸಿಕೆಯನ್ನು ಪಡೆಯುವಂತಿಲ್ಲ. ಆದರೆ ಸೋಂಕಿನ ಅಪಾಯದಿಂದ ಪಾರು ಮಾಡಲು ಅವರನ್ನೂ ಲಸಿಕೆಯ ಫಲಾನುಭವಿಗಳನ್ನಾಗಿ ಮಾಡುವುದರ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ.

ಕೋವಿಡ್ ಲಸಿಕಾ ಅಭಿಯಾನವು ಆರಂಭವಾಗಿದ್ದು ವಿವಿಧ ಹಂತಗಳಲ್ಲಿ ಕೊಡಲಾಗುತ್ತಿದೆ. ಆರೋಗ್ಯ ಕಾರ್ಯಕರ್ತರು, ಪೋಲಿಸ್ ಇಲಾಖೆಯವರು, ಗೃಹರಕ್ಷಣಾ ಸಿಬ್ಬಂದಿಗಳು ಮೊದಲಾದ ಕೊರೊನಾ ಯೋಧರು ಈಗ ಎರಡನೆಯ ಚುಚ್ಚುಮದ್ದನ್ನೂ ಪೂರೈಸಿದ್ದಾರೆ. ಆದರೆ ಅರವತ್ತು ಮತ್ತು ನಲವತ್ತೈದು ವರ್ಷ ಮೇಲ್ಪಟ್ಟ ನಾಗರಿಕರು ಲಸಿಕೆಯ ಮೊದಲ